ಉಪಪೀಠಗಳನ್ನು ಮೂರು ವಿಭಾಗೀಯ ಕೇಂದ್ರಗಳಲ್ಲಿ ಸ್ಥಾಪಿಸಬೇಕೆ ಎಂಬ ಬಗ್ಗೆ ತ್ವರಿತವಾಗಿ ತೆಗೆದುಕೊಳ್ಳಲಾಗುವುದು.

ಮಾನ್ಯ ಅಧ್ಯಕ್ಷರೇ, ಸುಮಾರು 13 ಸಾವಿರ ಇಂಥ ಪ್ರಕರಣಗಳು ಇತ್ಯರ್ಥಕ್ಕಾಗಿ ಹೈಕೋರ್ಟ್‌ನವರ ಮುಂದೆ ಇವೆ. ಈಗ ಈ ವಿಷಯದಲ್ಲಿ 2 ಪ್ರಶ್ನೆಗಳು ನಮ್ಮ ಮುಂದೆ ಉದ್ಭವವಾಗುತ್ತವೆ. ಒಂದನೆಯದಾಗಿ ವಿಶೇಷ ನ್ಯಾಯ ಪೀಠವನ್ನು ರಚಿಸಿ ಹೈಕೋರ್ಟ್‌ನಲ್ಲಿ ಇದನ್ನು ಬಗೆಹರಿಸಲು ಸಾಧ್ಯವೇ ಎಂಬುದನ್ನು ನಮ್ಮ ಮಾನ್ಯ ಕಾನೂನು ಸಚಿವರು ಮುಖ್ಯ ನ್ಯಾಯಾಧೀಶರೊಡನೆ ಮಾತನಾಡುವವರಿದ್ದಾರೆ. ಒಂದು ಸಮಯ ಈ ರೀತಿ ಮಾಡಲು ಆಗದೇ ಇದ್ದ ಪಕ್ಷದಲ್ಲಿ ಒಂದು ಅಥವಾ ಎರಡು ನ್ಯಾಯ ಪೀಠಗಳನ್ನು ಹೊಂದಿದಂಥ ಅಪಿಲೇಟ್ ಟ್ರಿಬ್ಯುನಲ್‌ಗಳನ್ನು ರಚಿಸಿ ಇದನ್ನು ಸಾಧ್ಯವಾದಷ್ಟು ಬೇಗ ಮುಗಿಸಲು ತೀರ್ಮಾನ ಮಾಡಿದ್ದೇನೆ.

ಉಪಾಧ್ಯಕ್ಷರು : ಶ್ರೀ ಯು.ಬಿ. ಬಣಕಾರ್....

ಶ್ರೀ ಯು.ಬಿ. ಬಣಕಾರ್ : ಸನ್ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯಲ್ಲಿ ಅದರಲ್ಲೂ ಹಿರೇಕೆರೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಕೊರತೆಯಿಂದ ಸಾರ್ವಜನಿಕರಿಗೆ, ದನಕರುಗಳಿಗೆ ಬಹಳ ತೊಂದರೆಯುಂಟಾಗಿದ್ದು ಅದನ್ನು ಬಗೆಹರಿಸಲು ಧಾರವಾಡ ಜಿಲ್ಲಾ ಪಂಚಾಯತ್ ....

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರವನ್ನು ನಾಳೆ ಒದಗಿಸಿಕೊಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಯೋಗೀಶ್ ಭಟ್‌ರವರದ್ದನ್ನು ಮತ್ತು ಶ್ರೀ ಯು.ಬಿ. ಬಣಕಾರ್‌ರವರ ವಿಚಾರಕ್ಕೆ ಉತ್ತರವನ್ನು ನಾಳೆ ಒದಗಿಸಿ.

(3) ಮೆಗನಾನ್ ಆಸ್ಪತ್ರೆಯ ಡಾ. ಆನಂದ್ ಅವರ ನಡವಳಿಕೆಗೆ ಸೂಕ್ತ ಕ್ರಮ

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಮೆಗನಾನ್ ಆಸ್ಪತ್ರೆಯ ಅರವಳಿಕೆ ವೈದ್ಯರಾದ ಡಾ|| ಆನಂದ್‌ರವರ ಈ ಕೆಳಕಂಡ ವಿಚಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಅಧರಲ್ಲಿ ಹಾಜರಿ ಪುಸ್ತಕದಲ್ಲಿ ತಿದ್ದಿರುವ ಬಗ್ಗೆ ಜಿಲ್ಲಾ ಸರ್ಜನ್ ನೋಟಿಸ್ ಕೊಟ್ಟಿರುವ ಬಗ್ಗೆ, ಧಿಡೀ ಹಾಕದೇ ಆಸ್ಪತ್ರೆಗೆ ಬರದಿರುವ ಬಗ್ಗೆ, ಆಪರೇಶನ್‌ಗೆ ಆಗಾಗ್ಗೆ ಅವಶ್ಯಕವಾಗಿ ಇರಲೇಬೇಕಾದ ವೈದ್ಯರು ಹಾಜರಾಗದೇ ಇರುವ ಬಗ್ಗೆ, ಜಿಲ್ಲಾ ಸರ್ಜನ್‌ಗಳು ಕೊಟ್ಟಿರುವ ನೋಟಿಸ್‌ಗಳ ಬಗ್ಗೆ ಅಲಕ್ಷ್ಯವನ್ನು ತೋರಿಸಿ ಮೇಲ್ಕಾಣಿಸಿರುವ ತಪ್ಪುಗಳನ್ನು ಮಾಡಿರುವ ಡಾ|| ಆನಂದ್‌ರವರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಿರಾ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಉಪಾಧ್ಯಕ್ಷರೇ,

ಡಾ. ಆನಂದರವರು, ದಿನಾಂಕ 26-4-1970ರಿಂದ ಈ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ. ಸದರಿಯವರು ಎಂ.ಡಿ. (ಅರವಳಿಕೆ) ವಿದ್ಯಾರ್ಹತೆ ಹೊಂದಿದ್ದು ಎಲ್ಲಾ ಶಸ್ತ್ರ ಚಿಕಿತ್ಸಾ ಸಂದರ್ಭಗಳಲ್ಲಿ ಇವರ ಸೇವೆಯು ಅವಶ್ಯವಿರುತ್ತದೆ. ಸದರಿಯವರು ದಿನಾಂಕ 30-1-1986ರಿಂದ ಶಿವಮೊಗ್ಗದ ಮೆಗ್ಗಾನ್ ಜಿಲ್ಲಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ.

ಡಾ. ಆನಂದರವರು, 1987ರಲ್ಲಿ ಒಮ್ಮೆ ಹಾಜರಿ ಪುಸ್ತಕವನ್ನು ತಿದ್ದಿದ್ದ ಪ್ರಕರಣ ಗಮನಕ್ಕೆ ಬಂದಿದ್ದು ಅದರ ಬಗ್ಗೆ ಸೂಚನೆ ಹಾಗು ಸೂಕ್ತ ತಿಳುವಳಿಕೆ ನೀಡಲಾಗಿದೆ. ಇವರು ದಿನಾಂಕ 31-1-91 ರಿಂದ 30-5-91ರವರೆಗೆ ನಾಲ್ಕು ತಿಂಗಳ ಕಾಲ ಸೇವೆಗೆ ಗೈರು ಹಾಜರಾಗಿದ್ದರು. ಈ ಸಂಬಂಧದಲ್ಲಿ ವಿಷಯದ ಪೂರ್ಣ ಪರಿಶೀಲನೆ ನಂತರ

ಸದರಿ ಅವಧಿಯನ್ನು ರಜೆ ಎಂದು ಸಕ್ರಮಗೊಳಿಸಲಾಗಿರುತ್ತದೆ. ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಳು ನಡೆಯುವ ಸಂದರ್ಭದಲ್ಲಿ ಹಾಗೂ ಸದರಿ ಆಸ್ಪತ್ರೆಯ ಕೆಲಸ ವೇಳೆಯಲ್ಲಿ ಇವರು ಹಾಜರಿರುತ್ತಾರೆ ಹಾಗು ಇವರ ಸೇವೆ ಸಹ ಅವಶ್ಯವೆನಿಸಿದಾಗ ಲಭ್ಯವಿರುತ್ತದೆ. ಕೆಲಸದ ವೇಳೆಯಲ್ಲಿ ಕಾರ್ಯಸ್ಥಾನದಲ್ಲಿ ಇಲ್ಲದಿರುವ ಮುಂತಾದ ಸಣ್ಣಪುಟ್ಟ ಆಕ್ಷಪಣೆಗಳಿಗೆ ಸಂಬಂಧಪಟ್ಟಂತೆ ಈ ವೈದ್ಯರಿಗೆ ಜಿಲ್ಲಾ ಶಸಸ್ತ್ರ ಚಿಕಿತ್ಸಕರು ಸಕಾಲಿಕ ತಿಳುವಳಿಕೆ ಮತ್ತು ಎಚ್ಚರಿಕೆಗಳನ್ನು ಕೊಟ್ಟಿರುತ್ತಾರೆ. ಇಂತಹ ನಡವಳಿಕೆಯನ್ನು ಮುಂದುವರಿಸಿದಲ್ಲಿ ತೀವ್ರ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಚುನಾವಣಾ ಪ್ರಸ್ತಾವ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯ ಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶಾಸನ ರಚನೆ

1. ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ)ವಿಧೇಯಕ, 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

2. ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ. ನಾಣಯ್ಯ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.